## ಕತೆ

ಬಿಸಿಲು ಮಧ್ಯಾಹ್ನದ ಪ್ರಖರತೆಯನ್ನ ಕಳೆದುಕೊಂಡು ಮಾಗುವ ಹೊತ್ತು; ಕಲ್ಯಾಣಮಂಟಪದ ಹಿಂಭಾಗದಲ್ಲಿ ಕೆಲಸದವರ, ಅಡುಗೆಪಾತ್ರೆ, ಸಲಕರಣೆ ತೊಳೆಯುವವರ ಮಾತುಗಳನ್ನ ಬಿಟ್ಟರೆ ನೀರವ ವಾತಾವರಣ. ತೆಳುವಾಗಿ ಬೀಸುವ ಗಾಳಿ. ವರಾಂಡದ ಕಟ್ಟೆಯ ಮೇಲೆ ಕುಳಿತಿದ್ದ ಮನೋಹರನ ಮನಸ್ಸಿನ ಕಾರ್ಮೋಡ ಇನ್ನೂ ಕರಗಿರಲಿಲ್ಲ. ಎಷ್ಟೇ ಗಟ್ಟಿಮಾಡಿಕೊಂಡರೂ ಒಳಗೆಲ್ಲ ಕೊರೆಯುವ ವಿಷಾದ. ಸಣ್ಣಗೆ ಜಿನುಗುವ ನೋವು. ಅವನ್ನೆಲ್ಲ ಸಹಿಸುತ್ತ ಹಳದಿಯಾಗುತ್ತಿದ್ದ ಬಿಸಿಲು ಕುಣಿಯುತ್ತಿದ್ದ ಎದುರಿನ ಬಯಲನ್ನ ನೋಡುತ್ತಿದ್ದ.

ಅಲ್ಲೇ ಎದುರಿನಲ್ಲಿ ಆಡುತ್ತಿದ್ದ ಇಬ್ಬರು ಮಕ್ಕಳು ಮನೋಹರನ ಬಳಿ ಬಂದುನಿಂತರು. ಸುಮಾರು ಹತ್ತುವರ್ಷದ ಹುಡುಗ, ಅವನಿಗಿಂತ ಸಣ್ಣ ವಯಸ್ಸಿನ ಹುಡುಗಿ. ಹುಡುಗನ ಕೈಯಲ್ಲಿ ಕಾಗದ ಹರಿದಹೋದ ಗಾಳಿಪಟ. ಅದಕ್ಕೆ ಜೋತುಬಿದ್ದ ನಾಲ್ಕಾರು ಮಾರುದ್ದದ ದಾರ. ಯಾರೋ ಹಾರಿಸಿದ ಪಟ ಹರಿದುಬಂದು ಇಲ್ಲಿ ಬಿದ್ದದ್ದನ್ನ ಹೆಕ್ಕಿಕೊಂಡು ಮತ್ತೆ ಹಾರಿಸುವ ಪ್ರಯತ್ನ ಮಾಡಿ ಸೋತಿದ್ದರು. ಅವರೇಕೆ ತನ್ನ ಬಳಿ ಬಂದರು, ಏನೂ ಹೇಳದೇ ನಿಂತರು? ಎನ್ನುವ ಪ್ರಶ್ನೆ ಮೂಡಿತು. ಅಲ್ಲಲ್ಲಿ ಹರಿದ ಉಡುಪು, ಮಲಿನವಾದ ತಲೆಗೂದಲು, ಬಿಸಿಲಲ್ಲಿ ಕಂದಿದ್ದರೂ ಜೀವನೋತ್ಸಾಹದ ಮುಗ್ಧ ಮುಖ, ಅವೆಲ್ಲಕ್ಕಿಂತ ಪ್ರಖರವಾದ ಕಾಂತಿಯ ಕಣ್ಣುಗಳ ಆ ಮಕ್ಕಳನ್ನ ಪ್ರಶ್ನಾರ್ಥಕ ಭಾವದಲ್ಲಿ ನೋಡಿದ. ಅದು ಅರ್ಥವಾಗಿರಬೇಕು ಮಕ್ಕಳಿಗೆ. 'ಸರಿ ಮಾಡಿಕೊಡು' ಎಂದು ಆ ಪಟವನ್ನು ಅವನೆದುರು ಚಾಚಿದರು.

ತಟ್ಟನೆ ಮನೋಹರನಿಗೆ ಹೊಳೆಯಿತು. ನಿನ್ನೆ ಮಂಟಪ ಮಾಡುತ್ತಿದ್ದಾಗ ತಾವು ಕತ್ತರಿಸಿದ ಬಣ್ಣದ ಕಾಗದ, ಬೇಗಡೆ, ಥರ್ಮೋಕೋಲ್ ತುಂಡುಗಳನ್ನ ಆಯ್ದು ಅಲ್ಲೇ ಪಕ್ಕದಲ್ಲಿ ಆಟವಾಡುತ್ತಿದ್ದ ಆ ಕಲ್ಯಾಣಮಂಟಪದ ಕೆಲಸದ ಹೆಂಗಸಿನ ಮಕ್ಕಳು ಇವರು ಎಂದು. ತನ್ನ ಕೆಲಸದ ನಡುವೆ ಅವರ ಆಟವನ್ನು ಗಮನಿಸುತ್ತ ತಾನು ಚಿಕ್ಕವನಿದ್ದಾಗ ಇದೇ ಥರ ಆಡುತ್ತಿದ್ದುದು ಮನೋಹರನಿಗೆ ಆಗ ನೆನಪಾಯಿತು. ಅದೇ ನೆನಪಿನಲ್ಲಿ ತನ್ನಿಂದ ಸರಿಮಾಡಿಸಿಕೊಳ್ಳಬಹುದು ಎಂದು ಬಂದಿರಬೇಕೆಂದು ಊಹಿಸಿದ.

'ಇಲ್ಲೇ ಇರಿ, ಬಂದೆ' ಎಂದು ಅಲ್ಲೇ ಕೋಣೆಯೊಂದರಲ್ಲಿ ಇಟ್ಟಿದ್ದ ತಮ್ಮ ಪರಿಕರಗಳ ಚೀಲ, ಬಣ್ಣದ ಕಾಗದದ ಕಟ್ಟು ಎತ್ತಿಕೊಂಡು ಬಂದು ವರಾಂಡದ ನೆಲದ ಮೇಲೆ ಕುಳಿತ. ಆ ಪಟದ ಹರಿದ ಕಾಗದವನ್ನ ಕಿತ್ತುಹಾಕಿ, ಪಟದ ಕಡ್ಡಿಗಳನ್ನು ಪುನಃ ದಾರದಿಂದ ಬಿಗಿಯಾಗಿ ಕಟ್ಟಿದ. ಬಣ್ಣದ ಕಾಗದಗಳನ್ನ ಕತ್ತರಿಸಿ, ಗೋಂದು ಹಚ್ಚಿ ಅಂಟಿಸಿದ. ಪಟಕ್ಕೆ ಉದ್ದನೆಯ ನಾಲ್ಕಾರು ಕಾಗದದ ಬಾಲಂಗೋಚಿಯನ್ನು ಜೋಡಿಸಿದ. ಅವೆಲ್ಲವನ್ನು ಮಾಡುತ್ತಿದ್ದಾಗ ತನ್ನ ಕೆಲಸವನ್ನ ಕುಕ್ಕರಗಾಲಲ್ಲಿ ಕುಳಿತ ಆ ಮಕ್ಕಳು ಅಚ್ಚರಿಯಿಂದ ನೋಡುತ್ತಿದ್ದುದನ್ನ ಗಮನಿಸಿದ ಮನೋಹರನಿಗೆ ಅದೇಕೋ ಆ ಮಕ್ಕಳ ಮೇಲೆ ಮನಸ್ಸು ತುಂಬಿ ಬಂತು. ತನ್ನ ಚೀಲದಿಂದ ದಾರದ ಉಂಡೆ ತೆಗೆದು ಪಟಕ್ಕೆ ದಾರದ ತುದಿಯನ್ನು ಕಟ್ಟಿ, ಆ ಹುಡುಗನಿಗೆ ಕೊಡಲೆಂದು ಚಾಚಿದವ ಏನೋ ನೆನಪಾಗಿ ಡ್ರಾಯಿಂಗ್ ಪೆನ್‌ನಿಂದ ಪಟದ ಕಾಗದದ ಮೇಲೆ ಎರಡು ದೊಡ್ಡ ಕಣ್ಣುಗಳನ್ನ ಬಿಡಿಸಿದ. ಅದನ್ನು ನೋಡಿದ್ದೇ ಮಕ್ಕಳಿಬ್ಬರೂ ಕೈ ತಟ್ಟಿ ಕುಣಿಯುತ್ತ ಬಯಲಿಗೆ ಓಡಿದರು.

ಆ ಮಕ್ಕಳು ಬಯಲಿನಲ್ಲಿ ಗಾಳಿಪಟವನ್ನು ಹಾರಿಸಲು ಯತ್ನಿಸುತ್ತಿದ್ದುದನ್ನ ಮನೋಹರ ನೋಡುತ್ತಿದ್ದರೂ ಅದು ಪೂರ್ಣವಾಗಿ ಅವನ ಒಳಗಿಳಿಯುತ್ತಿರಲಿಲ್ಲ. ಪಟ ಹಾರಿಸುವ ವಿಧಾನ ಗೊತ್ತಿಲ್ಲದ ಆ ಪುಟ್ಟ ಹುಡುಗನಿಗೆ ಏನೇ ಮಾಡಿದರೂ ನೆಲದ ಮೇಲೆ ಕವುಚಿಕೊಳ್ಳುವ ಪಟವನ್ನು ಗಾಳಿಯಲ್ಲಿ ಮೇಲೇರಿಸಲು ಸಾಧ್ಯವಾಗುತ್ತಿರಲಿಲ್ಲ. ಇಬ್ಬರೂ ತಮಗೆ ತಿಳಿದ ರೀತಿಯಲ್ಲಿ ಸಮಾಲೋಚಿಸಿ ಪುನಃ ಪುನಃ ಯತ್ನಿಸಿದರೂ ಚೂರು ಮೇಲೆದ್ದ ಪಟ ಮತ್ತೆ ನೆಲಕ್ಕೆ ಬೀಳುತ್ತಿತ್ತು. ಅತ್ತಿತ್ತ ಓಡಿ